ಬಾಡಿಗೆ ಮನೆಯವರ ಮನವಿ ಬಗ್ಗೆ ಕಾರ್ಯಕ್ರಮ.

1161 - ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಮನೆ ಬಾಡಿಗೆದಾರರ ಮನವಿ ಬಗ್ಗೆ ಸರ್ಕಾರ ಯಾವ ರೀತಿಯ ಕಾರ್ಯಕ್ರಮ ತೆಗೆದುಕೊಂಡಿದೆ.

ಆ) ಪ್ರಮೀಳಾ ಸಮಿತಿಯ ವರದಿಯನ್ನು ಸರ್ಕಾರ ಅಂಗೀಕಾರ ಮಾಡುವುದೆ.

ಇ) ಹಾಗಿದ್ದಲ್ಲಿ, ಸದರಿ ವರದಿಯು ಎಂದಿನಿಂದ ಜಾರಿಗೆ ಬರುತ್ತದೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು) :

ಅ) ಕರ್ನಾಟಕ ಬಾಡಿಗೆ ನಿಯಂತ್ರಣ ಕಾಯ್ದೆ, 1961ರಲ್ಲಿ ಬಾಡಿಗೆದಾರರ ಮತ್ತು ಮನೆ ಮಾಲೀಕರ ಮನವಿಗಳನ್ನು ಪರಿಗಣಿಸಲು ಅವಕಾಶವನ್ನು ಕಲ್ಪಿಸಲಾಗಿದೆ.

ಆ) ಪ್ರಮೀಳಾ ಸಮಿತಿಯ ವರದಿಯನ್ನು ಸರ್ಕಾರ ಕೆಲವು ತಿದ್ದುಪಡಿಯೊಂದಿಗೆ 1982ರಲ್ಲಿ ಅನುಮೋದಿಸಿ ಒಂದು ಕರಡು ಮಸೂದೆಯನ್ನು 22-8-1986ರಲ್ಲಿ ವಿಧಾನ ಸಭೆಯಲ್ಲಿ ಮಂಡಿಸಲಾಗಿತ್ತು. ತದನಂತರ ಈ ಕರಡು ಮಸೂದೆಯನ್ನು ವಿಧಾನ ಮಂಡಲದ ಜಂಟಿ ಸಮಿತಿಗೆ ವರದಿಗಾಗಿ ಒಪ್ಪಿಸಲಾಗಿತ್ತು. ಈ ಸಮಿತಿಯ ವರದಿಯು ಬರುವುದರೊಳಗಾಗಿ ವಿಧಾನ ಸಭೆಯು ವಿಸರ್ಜನೆಯಾಯಿತು. ಸದರಿ ಸಮಿತಿಯನ್ನು ಪುನರ್‌ರಚಿಸಲು ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಇ) ವಿಧಾನ ಮಂಡಲದ ಜಂಟಿ ವರದಿಯು ಬಂದನಂತರ ಶ್ರೀಮತಿ ಪ್ರಮೀಳಾ ಸಮಿತಿಯನ್ನು ಗಮನದಲ್ಲಿಟ್ಟುಕೊಂಡು ಈಗಿನ ಕರ್ನಾಟಕ ಬಾಡಿಗೆ ನಿಯಂತ್ರಣ ಕಾಯ್ದೆಯನ್ನು ಸೂಕ್ತ ರೀತಿಯಲ್ಲಿ ತಿದ್ದುಪಡಿ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಮಂಗಳೂರು ತಾಲ್ಲೂಕಿನಲ್ಲಿ ಮಾಶಾಸನ ಸೌಲಭ್ಯ

537 - ಶ್ರೀ ಬಿ.ಎಂ. ಇದಿನಬ್ಬ(ಉಳ್ಳಾಲ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡದ ಮಂಗಳೂರು ತಾಲ್ಲೂಕಿನಲ್ಲಿ 1987-88,1988-89,1989-90ನೇ ಡಿಸೆಂಬರ್ ಅಖೈರ್‌ವರೆಗೆ ಎಷ್ಟು ಜನರಿಗೆ ವಿಧವಾ ಮಾಶಾಸನ, ವೃದ್ಧಾಪ್ಯವೇತನ ಅಂಗವಿಕಲರ ವೇತನ ಕೊಡಲಾಗಿದೆ.

(ಬೇರೆ ಬೇರೆಯಾಗಿ ವಿವರ ಕೊಡುವುದು)

ಆ) ಎಷ್ಟು ಅರ್ಜಿಗಳು ಬಾಕಿ ಉಳಿದಿವೆ.

ಇ) 1987 ರಿಂದ 1990ನೇ ಡಿಸೆಂಬರ್ ಅಖೈರುವರೆಗೆ ಎಲ್ಲೆಲ್ಲಿ ಎಷ್ಟೆಷ್ಟು ಜನ ಸಂಪರ್ಕ ಸಭೆಗಳು, ಜರುಗಿವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು) :

ಅ) ಉತ್ತರಗಳು

	ವೃ.ವೇ.	ವಿಧವಾ ಮಾಶಾಸನ	ಅಂಗವಿಕಲ ಮಾಶಾಸನ
1987-88	76	64	819
1988-89	185	166	868
1989-90	58	64	227

2) ವೃದ್ಧಾಪ್ಯ ವೇತನ	ವಿಧವಾ ಮಾಶಾಸನ	ಅಂಗವಿಕಲರ ವೇತನ
48	112	33

3) ವಿವರ ಕೆಳಕಂಡಂತಿದೆ.

1987-88 – ಇಲ್ಲ

1988-89 – 5

1) ಉಳ್ಳಾಲ

2) ಕುಡುಪು

3) ಪೆಡುಪ್‌ರಾರ್

4) ಎಕ್ಕಾರ್

5) ಕಾಟಿಪಳ್ಳ

1989-90. 1. ಗಂಜಿಮಠ

ಹಂಗಾಮಿ ನೌಕರರ ಸೇವೆಯನ್ನು ನಿಗದಿತಗೊಳಿಸುವುದು.

529 - ಶ್ರೀ ಎಸ್. ಆರ್. ಮೋರೆ (ಧಾರವಾಡ) : ಮಾನ್ಯ ಕೃಷಿ ಮತ್ತು ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಧಾರವಾಡ ಕೃಷಿ ವಿಶ್ವವಿದ್ಯಾನಿಲಯದಲ್ಲಿ 10 ರಿಂದ 18 ವರ್ಷಗಳವರೆಗೆ ಹಂಗಾಮಿ ನೌಕರರಾಗಿಯೇ ಸೇವೆ ಸಲ್ಲಿಸುತ್ತಿರುವ ನೌಕರರು ಅನೇಕ ಸಲ ತಮ್ಮ ಸೇವೆಯನ್ನು ಖಾಯಂ ಮಾಡಬೇಕೆಂದು ವಿನಂತಿಸಿಕೊಂಡಿರುವರೇ?

ಆ) ಅಂಥವರಿಗೆ ನ್ಯಾಯ ದೊರಕಿಸಿ ಕೊಡಲು ಸರ್ಕಾರ ಈವರೆಗೆ ಯಾವ ಕ್ರಮ ಕೈಗೊಂಡಿರುವುದು?

ಇ) ಅದಷ್ಟು ಬೇಗ ಅವರ ಬೇಡಿಕೆ ಈಡೇರಿಸಿ, ಸರ್ಕಾರ ಆ ಬಡ ನೌಕರರಿಗೆ ನ್ಯಾಯ ಒದಗಿಸಿಕೊಡುವುದೇ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಕೃಷಿ ಮತ್ತು ತೋಟಗಾರಿಕೆ ಸಚಿವರು):

ಅ) ಹೌದು.

ಆ) ಧಾರವಾಡ ಕೃಷಿ ವಿಶ್ವವಿದ್ಯಾನಿಲಯ ಮತ್ತು ಸರ್ಕಾರದ ಪರಿಶೀಲನೆಯಲ್ಲಿದೆ.

ಇ) ತ್ವರಿತವಾಗಿ ತೀರ್ಮಾನ ತೆಗೆದುಕೊಳ್ಳಲಾಗುವುದು.

ಆನೇಕಲ್ ತಾಲ್ಲೂಕಿನಲ್ಲಿ ಬಗರ್‌ಹುಕುಂ ಸಾಗುವಳಿ ಮಾಡುವವರ ಸಂಖ್ಯೆ.

ಶ್ರೀ ಎಂ. ಪಿ. ಕೇಶವಮೂರ್ತಿ (ಆನೇಕಲ್) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಜಿಲ್ಲೆ, ಆನೇಕಲ್ ತಾಲ್ಲೂಕಿನಲ್ಲಿ ಸರ್ಕಾರದ ಜಮೀನಿನಲ್ಲಿ ಬಗರ್‌ಹುಕುಂ ಸಾಗುವಳಿ ಮಾಡುತ್ತಿರುವವರ ಸಂಖ್ಯೆ ಎಷ್ಟು? ಹಾಗೂ ಅದರ ವಿಸ್ತೀರ್ಣವೆಷ್ಟು?

ಆ) ಇದರಲ್ಲಿ ಹಸಿರು ವಲಯ ಪಟ್ಟಿ ಜಮೀನನ್ನು ಸಾಗುವಳಿ ಮಾಡುತ್ತಿರುವುದು ನಿಜವೇ?

ಇ) ಹಾಗಿದ್ದಲ್ಲಿ, ಈ ಸಾಗುವಳಿಯನ್ನು ಸಕ್ರಮಗೊಳಿಸಲು ಸರ್ಕಾರದವರು ಕೈಗೊಂಡ ಕ್ರಮಗಳಾವುವು?